31	ಆಫ್ರಿಕಾ	Mr.Tony Wilson	ದಕ್ಷಿಣ ಕನ್ನಡ	116/2007	ವಿದೇಶಿ ತಾಯ್ತನವನ್ನು ಕ್ರಮ ಅದುಗಿಸಿ ಪ್ರಸ್ತುತ ವಿದೇಶಿಯರನ್ನು ನ್ಯಾಯಾಂಗ ಬಂಧನದಲ್ಲಿಡಲಾಗಿದೆ.
32	ಆರ್ಮೆನಿ	Mr.Fritz Hennun Eglly Mrs. Ostolddki	ಕೊಪ್ಪಳ	240/2006	ವಿದೇಶಯಿಂದ ತರಲ 3000 ದಂಡ ವಿಧಿಸಿದ್ದು ದೇಶ ಬಿಟ್ಟು ಹೊರಹೋಗುವಂತೆ ಆದೇಶಿಸಿರುತ್ತದೆ. ದಿ : 24-03-2007 ರಂದು ರೇಕ್ ಬಿಟ್ಟು ಹೋಗಿದ್ದಾರೆ.
33	ಅಮಾಂಡ	Mr.Dosco	ಉತ್ತರ ಕನ್ನಡ	2/2006	ಇವರಿಗೆ 5 ತಿಂಗಳ ಸಾಧಾರಣ ಶಿಕ್ಷೆ ವಿಧಿಸಿದ್ದು ಸತ್ರ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.

488 (603) ಶ್ರೀ ತಿಪ್ಪಾರೆಡ್ಡಿ ಜಿ.ಹೆಚ್. (ಚಿತ್ರದುರ್ಗ) :– ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ನಗರಸಭೆಗೆ ಬರ ಪರಿಹಾರ ನಿಧಿಯಿಂದ ಹಣ ಬಿಡುಗಡೆಯಾಗಿದ್ದು, ಟಾಸ್ಕ್ ಫೋರ್ಸ್ ಸಮಿತಿಯ ಅನುಮೋದನೆ ಪಡೆಯದೇ ಕಾರ್ಯ ಪ್ರಾರಂಭಿಸಿರುವುದು ಸರಿಯೇ;

ಆ) ಚಿತ್ರದುರ್ಗ ನಗರಸಭೆಯ ಟಾಸ್ಕ್ ಫೋರ್ಸ್ (ಅಭಿವೃದ್ಧಿ) ಸಮಿತಿಯ ಅನುಮೋದನೆ ಪಡೆಯದೆ, ಕೆಲಸ ಪ್ರಾರಂಭಿಸಿರುವುದು ಟಾಸ್ಕ್ ಫೋರ್ಸ್ ಸಮಿತಿಯ ಅಧಿಕಾರಕ್ಕೆ ಚ್ಯುತಿ ಬರುವುದಿಲ್ಲವೆ;

ಇ) ಈ ಸಮಿತಿಯಲ್ಲಿ ಯಾವ ಯಾವ ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ? (ಇದರ ಬಗ್ಗೆ ಪೂರ್ಣ ವಿವರ ನೀಡುವುದು)

ಶ್ರೀ ಆಲಂಗೂರು ಶ್ರೀನಿವಾಸ (ಪೌರಾಡಳಿತ ಸಚಿವರು) :

ಅ) ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಬಿಡುಗಡೆಯಾದಂತಹ ಅನುದಾನವನ್ನು ತುರ್ತು ಸಂದರ್ಭಗಳಲ್ಲಿ ವಿನಿಯೋಗಿಸಲು ಅವಕಾಶವಿರುವುದರಿಂದ ಟಾಸ್ಕ್‌ಫೋರ್ಸ್ ಸಮಿತಿಯ ಘಟನೋತ್ತರ ಅನುಮೋದನೆ ಪಡೆಯುವ ನಿರೀಕ್ಷೆ ಮೇರೆಗೆ ರೂ.10,42,340–00 ಗಳನ್ನು ಕುಡಿಯುವ ನೀರಿಗಾಗಿ ವಿನಿಯೋಗಿಸಲಾಗಿದೆ.

ಆ) ತುರ್ತು ಪರಿಸ್ಥಿತಿಯಲ್ಲಿ ಸಮಿತಿಯ ಘಟನೋತ್ತರ ಅನುಮೋದನೆ ಪಡೆಯುವ ನಿರೀಕ್ಷೆಯ ಮೇರೆಗೆ ಕೆಲಸ ಮಾಡಿದ್ದರಿಂದ ಟಾಸ್ಕ್‌ಫೋರ್ಸ್ ಸಮಿತಿಯ ಅಧಿಕಾರಕ್ಕೆ ಚ್ಯುತಿ ಉಂಟಾಗಿರುವುದಿಲ್ಲ.

ಇ) ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಪ್ರಕೃತಿ ವಿಕೋಪ ಸಮಿತಿಯನ್ನು ರಚಿಸಿದ್ದು, 1) ಸದರಿ ಸಮಿತಿಯು ಪ್ರಕೃತಿ ವಿಕೋಪ ಪರಿಹಾರ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸುವುದು, 2) ಗಂಜಿ ಕೇಂದ್ರ, 3) ಗೋಶಾಲೆ ತೆರೆಯಲು ಜಿಲ್ಲಾ ಮಟ್ಟದ ಸಮಿತಿ ಶಿಫಾರಸ್ಸು ಮಾಡುವ ಅಧಿಕಾರವನ್ನು

ಹೊಂದಿದ್ದು, ಈ ಸಮಿತಿಯಲ್ಲಿ ಅನುಮೋದಿಸಲಾದ ಉದ್ಯೋಗ ಸೃಜನ ಕಾಮಗಾರಿ, ಜಾನುವಾರುಗಳ ರಕ್ಷಣೆಗಾಗಿ ಗೋಶಾಲೆಗಳ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

489 (785) ಶ್ರೀ ಖಾದರ್ ಯು.ಟಿ. (ಉಳ್ಳಾಲ) :- ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ಮತಕ್ಷೇತ್ರದ ಗ್ರಾಮೀಣ ಪ್ರದೇಶದ ರಸ್ತೆಗಳ ನಬಾರ್ಡ್ ಯೋಜನೆಯಲ್ಲಿ ಸೇರಿದ್ದು ಬೆಳರಂಗಿ ಖಾಜ ರಸ್ತೆಗೆ ಟೆಂಡರ್ ಕರೆದಿದ್ದು, ಕಾಮಗಾರಿ ಪ್ರಾರಂಭಿಸದಿರಲು ಕಾರಣವೇನು;

ಆ) ದೀರ ಕಟ್ಟಿಗೆ ಬರುವ ರಸ್ತೆಗಳು ಬಜೆಟ್‌ನಲ್ಲಿ ಮಂಜೂರಾಗಿ ಇದುವರೆಗೂ ಪ್ರಾರಂಭಿಸದಿರಲು ಕಾರಣವೇನು;

ಇ) ಫರೀದ್‌ನಗರ ವಡ್ಡದ ಗುರಿ ರಸ್ತೆಗಳು ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಈ ಕಾಮಗಾರಿ ಅರ್ಧಕ್ಕೆ ನಿಂತಿರಲು ಕಾರಣವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) ಈ ಕಾಮಗಾರಿಯು 29.50 ಲಕ್ಷ ರೂ ಮೊತ್ತದಲ್ಲಿ ಅನುಮೋದನೆಯಾಗಿದ್ದು, ದಿನಾಂಕ 28-12-2006ರಲ್ಲಿ ಗುತ್ತಿಗೆ ನಿಗದಿಪಡಿಸಲಾಗಿದೆ. ಸದರಿ ರಸ್ತೆಯು ಹಾದು ಹೋಗುವ ಭಾಗದಲ್ಲಿ ಭೂ ವಿವಾದ ಉಂಟಾಗಿದ್ದು, ಇದನ್ನು ಪರಿಹರಿಸಿ, ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಈ ಕಾಮಗಾರಿಗೆ ಗುತ್ತಿಗೆಯನ್ನು 27-12-2006 ರಲ್ಲಿ ನಿಗದಿಪಡಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಇ) ಸದರಿ ರಸ್ತೆಯು ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿದ್ದು, ಈ ಭಾಗದಲ್ಲಿ ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯ ಆಕ್ಷೇಪಣೆ ಇದ್ದುದರಿಂದ ಕಾಮಗಾರಿ ಆರಂಭಿಸಲು ವಿಳಂಬವಾಗಿರುತ್ತದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದ್ದು, ಡಿಸೆಂಬರ್ 2007ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.